### ಸೋತವನು ಬಾಳಿಯಾನು

‘ಸೋತವನು ಬಾಳಿಯಾನು’ (ಸಿ.ಎನ್. ಮುಕ್ತಾ, ಮೇ 5) ಲೇಖನ ಓದಿ ಬಹಳ ಸಂತೋಷವಾಯಿತು. ಎಸ್ಸೆಸ್ಸೆಲ್ಸಿ ಮತ್ತು ಪಿ.ಯು.ಸಿ. ಫಲಿತಾಂಶಗಳ ಈ ಸಮಯದಲ್ಲಿ ಮಕ್ಕಳಿಗೆ ಧೈರ್ಯ ತುಂಬಬೇಕಾಗಿರುವುದು ಅಗತ್ಯ. ಮಕ್ಕಳು ಕಡಿಮೆ ಅಂಕ ತಂದಿರುವುದಕ್ಕೆ ಮತ್ತು ಪರೀಕ್ಷೆಯಲ್ಲಿ ಅನುತ್ತೀರ್ಣವಾಗಿರುವುದಕ್ಕೆ ದಯವಿಟ್ಟು ದಂಡಿಸಬೇಡಿ. ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ. ಸೋತವರು ಮುಂದೆ ನಾಲ್ಕು ಜನ ಮೆಚ್ಚುವಂತಹ ಸಾಧನೆ ಮಾಡಲು ಪ್ರೇರೇಪಿಸಿ ಎಂದು ಪೋಷಕರಲ್ಲಿ ವಿನಂತಿ.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

### ತೊರೆಯ ನೀರಿನಲ್ಲಿ ಚಿನ್ನದ ಉಂಡೆಗಳು

‘ತೊರೆಯ ನೀರಿನಲ್ಲಿ ಚಿನ್ನದ ಉಂಡೆಗಳು’ (ಜಿ.ವಿ. ಅರುಣ, ಮೇ 5) ಮುಖಪುಟ ಲೇಖನ ತುಂಬ ಮೆಚ್ಚುಗೆ ಆಯಿತು. ಸಮಗ್ರ ಮಾಹಿತಿ ಹಾಗೂ ಕೌತುಕ ಹುಟ್ಟಿಸುವಂಥ ನಿರೂಪಣೆ ನನಗಿಷ್ಟವಾದ ಅಂಶಗಳು. ಲೇಖಕರಿಗೆ ಮತ್ತು ‘ಸುಧಾ’ ತಂಡಕ್ಕೆ ಧನ್ಯವಾದಗಳು.

—ರಾಮಮೂರ್ತಿ ವಿ.ಎಸ್., ಬೆಂಗಳೂರು

### ಚಿನ್ನದ ಹೊಳಪು ಕತ್ತಲ ಬದುಕು



‘ಚಿನ್ನದ ಹೊಳಪು ಕತ್ತಲ ಬದುಕು’ (ಎನ್. ಜಗನ್ನಾಥ ಪ್ರಕಾಶ್, ಮೇ 5) ಲೇಖನದಲ್ಲಿ ಕೋಲಾರದ ಚಿನ್ನದ ಗಣಿಯ ಕರಾಳ ಅಧ್ಯಾಯವೊಂದರ ಪರಿಚಯವಾಯಿತು. ಕನಿಷ್ಠ ವೇತನ, ಮೂಲಭೂತ ಸೌಕರ್ಯಗಳಿಲ್ಲದೇ ದುಡಿದ ಕಾರ್ಮಿಕರ ಬಗ್ಗೆ ವಿಷಾದವೆನಿಸಿತು. ಬ್ರಿಟಿಷರು, ತಮ್ಮ ಬೊಕ್ಕಸವನ್ನು ತುಂಬಿಕೊಳ್ಳಲು ಅಮಾಯಕರನ್ನು ಬಲಿಕೊಟ್ಟಿದ್ದು ಅಮಾನವೀಯ.

—ಪ್ರಭಾಪ್ರಸಾದ್, ಬೆಂಗಳೂರು

ಇಡೀ ಭಾರತವನ್ನೇ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದ ಬ್ರಿಟಿಷರು ಚಿನ್ನದ ಗಣಿಯನ್ನೇ ತಮ್ಮ ದೇಶಕ್ಕೆ ಸಾಗಿಸಲು ನೆರವಾದ ಕಾರ್ಮಿಕರಿಗೆ ಕನಿಷ್ಠ ಸೌಲಭ್ಯವನ್ನು ನೀಡದೆ, ಅವರ ಬದುಕನ್ನು ಕತ್ತಲಾಗಿಸಿದ್ದನ್ನು ಲೇಖಕರು ಎಳೆಎಳೆಯಾಗಿ ವಿವರಿಸಿದ್ದಾರೆ. ಇಂತಹ ಸತ್ಯವನ್ನು ಬಿಚ್ಚಿಟ್ಟ ‘ಸುಧಾ’ಕ್ಕೆ ಧನ್ಯವಾದಗಳು.

—ಭಾರತಿ ಗಂಗಾಧರ್, ಬೆಂಗಳೂರು

ಕೆ.ಜಿ.ಎಫ್. ಕುರಿತ ಲೇಖನ ಆ ಗಣಿಯಲ್ಲಿ ಕೆಲಸ ಮಾಡಿದ್ದ ಕಾರ್ಮಿಕರ ಭಯಾನಕ ಜೀವನಸ್ಥಿತಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಜೀವಮಾನದ ಬಹಳ ದಿನಗಳನ್ನು ಅಲ್ಲಿಯೇ ಕಳೆದಿರುವ ನನಗೆ, ಅದರ ಏಳುಬೀಳುಗಳ ಪೂರ್ಣ ಅರಿವಿದೆ. ಅದು ಅತ್ಯಂತ ವಿಜೃಂಭಣೆಯಿಂದ ಶೋಭಿಸುತ್ತಿದ್ದ ಸಮಯದಲ್ಲಿ ಅದು ನಿಜವಾಗಿಯೂ ಭಾಗ್ಯನಿಧಿಯೇ ಆಗಿತ್ತು. ಅಲ್ಲಿನ ರಾಬರ್ಟ್‌ಸನ್ ಪೇಟೆ, ಆ್ಯಂಡರ್ಸನ್ ಪೇಟೆ, ಅಲ್ಲಿನ ದೇವಾಲಯಗಳು, ಸಾಂಸ್ಕೃತಿಕ ಕೇಂದ್ರಗಳ ಬಗ್ಗೆಯೂ ತಿಳಿಸಿದ್ದರೆ ಲೇಖನ ಇನ್ನಷ್ಟು ಚೆನ್ನಾಗಿ ಮೂಡಿಬರುತ್ತಿತ್ತು.

—ಎ.ಕೆ. ಅನಂತಮೂರ್ತಿ, ಬಂಗಾರಪೇಟೆ

### ಸ್ಕ್ರೀನ್ ಟೈಮ್‌ಗೂ ಟೈಮ್ ಟೇಬಲ್

‘ಸ್ಕ್ರೀನ್ ಟೈಮ್‌ಗೂ ಟೈಮ್ ಟೇಬಲ್’ (ಸ್ವಯಂಪ್ರಭಾ, ಮೇ 5) ಲೇಖನವನ್ನು ಎಲ್ಲರೂ ಪಾಲಿಸಿದ್ದೇ ಆದರೆ ಸಂಸಾರ ಎಷ್ಟು ಸುಂದರ ಅಲ್ಲವೇ? ಈಗಿನ ಗ್ಯಾಜೆಟ್ ಜೀವನಕ್ಕೆ ಅತೀ ಸೂಕ್ತವಾದ ಲೇಖನ.

—ಜಯಶ್ರೀ, ಬೆಂಗಳೂರು

### ಬಾಬು ಭಂಡಾರಿಯ ಸಲೂನ್

‘ಬಾಬು ಭಂಡಾರಿಯ ಸೂಪರ್ ಸಲೂನ್’ (ವಿನಾಯಕ ಅರಳಸುರಳಿ, ಮೇ 5) ಪ್ರಬಂಧ ನನ್ನ ಬದುಕಿನ ಹಲವು ಘಟನಾವಳಿಗಳನ್ನು ನೆನಪಿಸಿತು. ಚಿಕ್ಕಂದಿನಲ್ಲಿ ನಮಗೆ ಕುರ್ಚಿಯ ಮೇಲೆ ಒಂದು ಮಣೆ ಹಾಕಿ ಕೂಡಿಸಿ ಕಟಿಂಗ್ ಶುರು ಮಾಡ್ತಾ ಇದ್ರು. ನಮಗೋ ಮಷಿನ್ ತಲೆ ಹತ್ತಿರ ಬಂದಾಗಲೇ ಅಳು. ನಮ್ಮ ತಂದೆ ಹೋದ ಮೇಲೆ ನಮ್ಮಣ್ಣಂದಿರು ಅದೇ ಕಟಿಂಗ್ ಸಲೂನ್‌ನಲ್ಲಿ ಅದೇ ಕಟಿಂಗ್ ಮಾಡಿಸುತ್ತಿದ್ದರು. ಎಸ್ಸೆಸ್ಸೆಲ್ಸಿಯಲ್ಲಿದ್ದಾಗ ನಮ್ಮಣ್ಣನ ಬಳಿ ಕೇಳಿಕೊಂಡು ಒಂದೇ ಒಂದು ಸಲ ಸ್ಟೆಪ್ ಕಟಿಂಗ್ ಮಾಡಿಸಿದ್ದೆ. ಒಂದೇ ಸಲೂನಿನಲ್ಲಿ ಸುಮಾರು ಮೂವತ್ತು ವರುಷ ಕಟಿಂಗ್ ಮಾಡಿಸಿದ್ದೆ. ಆ ಸಲೂನಿನ ಯಜಮಾನನ ಮಕ್ಕಳು ಅಮೆರಿಕದಲ್ಲಿ ಓದಿ, ಅಲ್ಲೇ ಕೆಲಸ ಮಾಡುತ್ತಿದ್ದಾರೆ. ಕಳೆದ ಏಳೆಂಟು ವರ್ಷಗಳಿಂದ ಆ ಸಲೂನಿನವನು ಸಿಕ್ಕಿಲ್ಲ. ಆದರೆ ಅಲ್ಲಿ ಕಟಿಂಗ್ ಮಾಡಿಸಿಕೊಳ್ಳುತ್ತಿದ್ದ ನೆನಪು ಮಾತ್ರ ಈಗಲೂ ಹಚ್ಚ ಹಸಿರಾಗಿದೆ.

—ಎಸ್. ವಿ. ಗೋಪಾಲ್ ರಾವ್, ಬೆಂಗಳೂರು

### ಚೆಲುವಿನ ಕುಂಡ ಜಕರಂಡ

‘ಚೆಲುವಿನ ಕುಂಡ ಜಕರಂಡ’ (ಡಾ. ಮಹದೇಶ್ವರ ಸ್ವಾಮಿ, ಮೇ 5) ಲೇಖನ ಸರಳ, ಸುಂದರವಾಗಿದೆ. ‘ಪತನಶೀಲ’, ‘ಭೂದೃಶ್ಯ’ ಎಂಬ ಕನ್ನಡ ಪದಗಳು ಮುದನೀಡುತ್ತವೆ. ‘ಸಸ್ಯಶಾಸ್ತ್ರೀಯ’ ಬದಲಿಗೆ ‘ಸಸ್ಯ ವೈಜ್ಞಾನಿಕ’ ಹೆಸರು ಎಂದಿದ್ದರೆ ಹೆಚ್ಚು ಸಮಂಜಸವಲ್ಲವೇ?

—ಶಶಿಧರ ಎಲೆ, ಬೆಂಗಳೂರು

### ಚಂದದ ವಿಶೇಷಾಂಕ

2022ರ ಯುಗಾದಿ ವಿಶೇಷಾಂಕ ಓದಿ ತುಂಬ ಸಂತೋಷ ಆಯಿತು. ಕಥೆಗಳು ಮತ್ತು ಕವನಗಳು ಚೆನ್ನಾಗಿದ್ದವು. ಇದಕ್ಕಾಗಿ ಕುತೂಹಲದಿಂದ ಕಾಯುತ್ತಿದ್ದೆ. ನಾನು ಉಳಿದುಕೊಳ್ಳುವ ಸ್ಥಳದಲ್ಲಿ ಅದು ಸಿಗದಿದ್ದಾಗ, ವಿಜಯಪುರಕ್ಕೆ ಹೋಗಿ ಖರೀದಿಸಿ ತಂದೆ. ಉತ್ತಮವಾದ ವಿಶೇಷಾಂಕಕ್ಕಾಗಿ ಧನ್ಯವಾದಗಳು.




—ಅನಿಲ್‌ಕುಮಾರ್ ವಾಲುಚ್‌ಕರ್

### ತಾಂಜಾನಿಯಾ ರಾಣಿ

‘ತಾಂಜಾನಿಯಾ ಕನಸಿನ ರಾಣಿ’ (ಪ್ರವೀಣ ಕುಲಕರ್ಣಿ, ಮೇ 5) ಪುರುಷ ಪ್ರಧಾನ ವ್ಯವಸ್ಥೆ ಸಂವಿಧಾನದಲ್ಲಿ ಇರುವ ಅಡೆತಡೆಗಳ ಮಧ್ಯದಲ್ಲಿಯೂ ಆಫ್ರಿಕಾ ಖಂಡದ ತಾಂಜಾನಿಯಾದ ಸುಮಿಯಾ ಸುಲುಹು ಹಸನ್ ಅಧ್ಯಕ್ಷೆ ಪಟ್ಟಕ್ಕೆ ಬಂದಿರುವುದು ಎಲ್ಲಾ ಹೆಣ್ಣುಮಕ್ಕಳು ಗರ್ವ ಪಡಬೇಕಾದ ವಿಷಯ.

—ವಿಜಯ ಜಿ. ರಾವ್, ಬೆಂಗಳೂರು

### ‘ವೈರಸ್’ ಕಾದಂಬರಿ

ಮೇ 5ರ ಸಂಚಿಕೆಯಿಂದ ಪ್ರಾರಂಭವಾದ ಸುದರ್ಶನ ಮೊಗಸಾಲೆ ಅವರ ಹೊಸ ಧಾರಾವಾಹಿ ‘ವೈರಸ್’ ಮೊದಲ ಕಂತು ಆಸಕ್ತಿಯಿಂದ ಓದಿಸಿಕೊಂಡು ಹೋಯಿತು. ಈ ಲೇಖಕರ ಕಥಾವಸ್ತು ಭಿನ್ನವೆನಿಸುತ್ತದೆ. ಆಸಕ್ತಿಯ ಜೊತೆಗೆ ಕುತೂಹಲವೂ ಹುಟ್ಟಿಸಿದೆ.

—ಮಲ್ಲಿಕಾರ್ಜುನ ಮೇಟಿ, ಕೊಪ್ಪಳ

### ಸುಂದರ ಸಂಚಿಕೆ

ಮೇ 5ರ ‘ಸುಧಾ’ ಸಂಚಿಕೆಯಲ್ಲಿ ಬಂದಿರುವ ಎಲ್ಲ ವಿಷಯಗಳೂ ಓದುವಂಥವು. ಕೈಯಲ್ಲಿ ಹಿಡಿದ ಮೇಲೆ ಪೂರಾ ಮುಗಿಸುವವರೆಗೂ ಕೆಳಗಿಡಲು ಮನಸ್ಸೇ ಬರಲಿಲ್ಲ. ಧಾರಾವಾಹಿಯಂತೂ ಆರಂಭದ ಕಂತೇ ಕುತೂಹಲಕಾರಿಯಾಗಿದೆ.

—ವೈದೇಹಿ, ಮಂಡ್ಯ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in